**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ.**

**ಉಪಸ್ಥಿತರುಃ**

**ಶ್ರೀಮತಿ. ಸವಿತ ರುದ್ರಗೌಡ ಚಿಕ್ಕನಗೌಡರ್, ಬಿ.ಎ., ಎಲ್.ಎಲ್.ಬಿ.**
**ಎರಡನೇ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕನಕಪುರ.**

**ಸಿ.ಸಿ. 929/2023**

| | | |
|---|---|---|
| ಪಿರ್ಯಾದುದಾರರು | ಃ | ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ |
| | | – ವಿರುದ್ಧ – |
| ಆರೋಪಿತ | ಃ | ಪ್ರಕಾಶ್.ಬಿ.ಎಸ್<br>ಬಿನ್ ಸಾವಂದಿಗೌಡ,<br>ವಯಸ್ಸು 48 ವರ್ಷಗಳು,<br>ವಾಸಃ ಬಿ.ಎಸ್ ದೊಡ್ಡಿ ಗ್ರಾಮ,<br>ಕಸಬಾ ಹೋಬಳಿ,<br>ಕನಕಪುರ ತಾಲ್ಲೂಕು,<br>ರಾಮನಗರ ಜಿಲ್ಲೆ. |

**:: ಆಪಾದನೆ ::**

ದಿನಾಂಕ 22.11.2022ರಂದು ಬೆಳಿಗ್ಗೆ 06.00 ಗಂಟೆ ಸಮಯದಲ್ಲಿ, ಬಿ.ಎಸ್. ದೊಡ್ಡಿ ಗ್ರಾಮದಲ್ಲಿ ಚಿಕ್ಕಹುಚ್ಚೇಗೌಡರವರ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿಯಾದ ನೀವು ಕೆ.ಎ-42-ಇ.ಡಿ-9990 ಹೊಂಡಾ ಡಿಯೋ ಸ್ಕೂಟರ್ ನ್ನು ಚಿಕ್ಕಹುಚ್ಚೇಗೌಡರವರ ಮನೆಯ ಮುಂದಿನ ರಸ್ತೆಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರುತ್ತೀರಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.279 ರಂತೆ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

**ಎರಡನೇಯದಾಗಿಃ** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಕೆ.ಎ-42-ಇ.ಡಿ-9990 ಹೊಂಡಾ ಡಿಯೋ ಸ್ಕೂಟರ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೆಯಲ್ಲಿ ಕಸ ಗುಡಿಸುತ್ತಿದ್ದ ಚಾಸಾ-1ರವರ ತಾಯಿ ಗೌರಮ್ಮ ರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಗೌರಮ್ಮ ರವರ ತಲೆಗೆ ತೀವ್ರವಾದ ರಕ್ತಗಾಯವಾಗಿ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ಹಾರೋಹಳ್ಳಿ ಚಂದ್ರಮ್ಮ

ದಯಾನಂದ ಸಾಗರ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುವಾಗ ಅದೇ ದಿನ ಬೆಳಿಗ್ಗೆ 07.30 ಗಂಟೆಯಲ್ಲಿ ಮೃತಪಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.304(ಎ) ರಂತೆ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆಯೊಳಗೆ ನಡೆದಿದ್ದು ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರಿಪಡಿಸಿದ್ದೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 18.02.2025 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್. ಸಿ. ಕನಕಪುರ.**

ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ ?

ಉತ್ತರ ಃ

ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ ಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್. ಸಿ. ಕನಕಪುರ.**